ಅ) ೧೯೮೯-೯೦ನೇ ಸಾಲಿನಲ್ಲಿ ವಿವಿಧ ವಿಧಾನಗಳ ಗುಂ ಸಾಧನೆ ಶೇ. ೯೦ ಆಗಿದ್ದು ವಿವರಗಳು ಈ ಕೆಳಗಿನಂತಿವೆ.

೧) ರಾಜ್ಯದ ನಾಲ್ಕು ವಿಭಾಗಗಳಲ್ಲಿ ಮೈಸೂರು ವಿಭಾಗದಲ್ಲಿಶೇ. ೧೦೮ ಮತ್ತು ಬೆಂಗಳೂರು ವಿಭಾಗದಲ್ಲಿ ಶೇ. ೯೫ ಸಾಧನೆಯಾಗಿದ್ದರೆ ಬೆಳಗಾಂ ವಿಭಾಗದಲ್ಲಿ ಶೇ. ೮೯ ಮತ್ತು ಗುಲ್ಬರ್ಗಾ ವಿಭಾಗದಲ್ಲಿ ಶೇ. ೭೫ ಸಾಧನೆಯಾಗಿದೆ.

೨) ರಾಜ್ಯದಲ್ಲಿ ೧೯೮೯-೯೦ನೇ ಸಾಲಿನಲ್ಲಿ ಗುಲ್ಬರ್ಗ ವಿಭಾಗದಲ್ಲಿ ವೈದ್ಯಕೀಯ ಮತ್ತು ವೈದ್ಯಕೀಯೇತರ ನೌಕರರ ಸ್ಥಾನಗಳು ಭರ್ತಿಯಾಗದೇ ಇರುವುದು ರಾಜ್ಯದ ಗುಂರಿ ಸಾಧನೆ ಪೂರ್ತಿಯಾಗದಿರುವುದಕ್ಕೆ ಕಾರಣವಾಗಿದೆ.

ಯಾಂತ್ರಿಕ ಖಿಸಾಯಿಖಾನೆಯನ್ನು ಕೈ ಬಿಡುವ ಬಗ್ಗೆ

೩೯೬ ಶ್ರೀ ರಾಮಲಿಂಗ ರೆಡ್ಡಿ (ಜಯನಗರ ಕ್ಷೇತ್ರ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಕಾಚರಕನಹಳ್ಳಿಯಲ್ಲಿ ಯಾಂತ್ರಿಕ ಕಸಾಯಿಖಾನೆಯನ್ನು ತೆರೆಯುವುದರ ವಿರುದ್ಧ ಸಾರ್ವಜನಿಕರು ಪ್ರತಿಭಟಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಹೌದು.

ಆ) ಆಧುನಿಕ ಕಸಾಯಿಖಾನೆಯನ್ನು ನಗರದ ಹೊರವಲಯದಲ್ಲಿ ಬೇರೆ ಜಾಗದಲ್ಲಿ ನಿರ್ಮಿಸುವ ಸಲುವಾಗಿ ಜಾಗದ ಲಭ್ಯವನ್ನು ಪರಿಶೀಲಿಸಲಾಗುತ್ತಿದೆ.

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಂ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆ ಮತ್ತು ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳಿಗಾಗಿ ಅಭ್ಯರ್ಥಿಗಳನ್ನು ಕರೆದಿರುವ ಬಗ್ಗೆ

೨೫೭ ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯು ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆ ಮತ್ತು ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳಿಗಾಗಿ ಒಂದು ಗುಂಪಿನ ಅಭ್ಯರ್ಥಿಗಳಿಗೆ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಟೆಲಿಗ್ರಾಂ ಮೂಲಕ ಸಂದರ್ಶನಕ್ಕೆ ಕರೆದಿದ್ದುದು ನಿಜವೆ ?

ಆ) ಹಾಗಿದ್ದಲ್ಲಿ ಸಂದರ್ಶನ ಸೂಚನೆಗಳನ್ನು ಟೆಲಿಗ್ರಾಂ ಮುಖಾಂತರ ಕಳುಹಿಸುವುದಕ್ಕೆ ಕಾರಣಗಳು ಏನು ?

ಇ) ಮೇಲ್ಕಂಡ ಹುದ್ದೆಗಳಿಗೆ ಸಂದರ್ಶನ ನಡೆದ ದಿನಾಂಕ ಯಾವುದು ?

ಈ) ಮೇಲ್ಕಂಡ ಹುದ್ದೆಗಳಿಗೆ ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳ ಸಂಖ್ಯೆ ?

ಉ) ನಿರ್ದೇಶಕರು ನಿವೃತ್ತರಾದ ದಿವಸ ನೇಮಕಾತಿ ಆದೇಶಗಳನ್ನು ನೀಡಿದುದು ಸತ್ಯವೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು

ಆ) ಬಹು ದೂರದಿಂದ ಬರುವ ಅಭ್ಯರ್ಥಿಗಳಿಗೆ ಸಂದರ್ಶನ ಸಮಾಚಾರವು ಸಾಕಷ್ಟು ಮುಂಚಿತವಾಗಿ ತಲುಪಬೇಕೆಂಬ ಕಾರಣದಿಂದ ಮತ್ತು ಅನುಕೂಲತೆಯ ದೃಷ್ಟಿಯಿಂದ ಟೆಲಿಗ್ರಾಂ ಮೂಲಕ ಸಂದರ್ಶನಕ್ಕೆ ಕರೆಯಲಾಯಿತು.